**DAB 430**

# ದ್ವಿತೀಯ ಬಿ.ಎ ಪದವಿ ಪರೀಕ್ಷೆ

ಆಗಸ್ಟ್ / ಸೆಪ್ಟಂಬರ್ **2011**

## ಅಂಚೆ ಮತ್ತು ತೆರಪಿನ ಶಿಕ್ಷಣ

### ಕನ್ನಡ ಐಚ್ಛಿಕ ಪತ್ರಿಕೆ –೨

### ನಡುಗನ್ನಡ ಮತ್ತು ಹೊಸಗನ್ನಡ ಪಠ್ಯಗಳು

### ಪಠ್ಯಗಳು: ಹರಿಶ್ಚಂದ್ರ ಕಾವ್ಯ ಸಂಗ್ರಹ; ಆಯ್ದ ಕುವೆಂಪು ಕವನಗಳು ಮತ್ತು ಗೆಲಿಲಿಯೊ)

*ಸಮಯ: 3 ಗಂಟೆಗಳು]* *[ಅಂಕಗಳು : 70/80*

**1.** ಅ) ಒಂದರ ಭಾವ ಸ್ವಾರಸ್ಯವನ್ನು ವಿವರಿಸಿ. **05** ಅಂಕಗಳು

೧) ಮಲೆತು ಬೆನ್ನಟ್ಟುವ ಮಹಾರಿಷಡುವರ್ಗಮಂ
ಗೆಲಲಟ್ ಯದವನಾವ ಹಗೆಗಳಂ ಗೆಲುವೆ ನಿ
ನ್ನೊಳಗೆ ಕರಣವ ಸಂತವಿಡಲರಿಯದವನಾವ
ದೇಶಮಂ ಸಂತವಿಡುವೆ
ಸಲೆ ತಪಸ್ತೇಜದಿಂ ಪುರುಷಾರ್ಥ ಕೋಶಮಂ
ಬಳಸಲರಿಯದನಾವ ತೇಜದಿಂ ಕೋಶಮಂ
ಬಳಸಿದಪೆ ಕಂಗೆಟ್ಟಾ ಕಡುಪಾಪಿ ಮೂರ್ಖ ಕೌಶಿಕ
ಕೇಳು ಕೇಳೆಂದರು.

೨) ಬಡಬಗ್ಗರ ಜಠರಾಗ್ನಿಯ ಎದ್ದು
ಗುಡಿಸಲುಗಳಿಗೆ ಬೆಂಕಿಯು ಬಿದ್ದು
ಧಗಧಗ ಧಗಧಗ ಹೊತ್ತಿದುದು
ಭುಗಿಭುಗಿಲೆನ್ನುತ ಮುತ್ತಿದುದು
ಮುಗಿಲಿನವರೆಗೂ ಬಾನಿನವರೆಗೂ
ದಿಕ್ಕು ದಿಕ್ಕುಗಳ ಜುಟ್ಟಿನವರೆಗೂ
ಬಡವರ ಬೆಂಕಿಯು ನಾಲಿಗೆ ಚಾಚಿ
ತಬ್ಬಿತು ಶ್ರೀಮಂತರ ಬಾಚಿ

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ **8 x ½ = 4** ಅಂಕಗಳು

ಕಪ್ಪಡ, ಓವು, ದಂತಿ, ಆಸಿ, ವಸುಧೆ, ತೃಣ, ನಿರ್ಜರ
ಅನಿಕೇತನ, ಅಭೀಪ್ಸೆ, ಜೂಟ, ವಿಪಿನ, ಸೇಂದ್ರಿಯ

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ. **2 x 2 = 4** ಅಂಕಗಳು

೧) ನಕ್ಷತ್ರಿಕ ೨) ಸಾಕ್ರಟಿಸ್ ೩) ಇನ್‌ಕ್ವಿಜಿಷನ್.

*ಮುಂದುವರೆದಿದೆ. . . . . . .2*

2. ನಾಲ್ಕಕ್ಕೆ ಸಂದರ್ಭ ಸೂಚಿಸಿ. ಸ್ವಾರಸ್ಯವನ್ನು ವಿವರಿಸಿ : 4 x 3 = 12 ಅಂಕಗಳು

೧) ಹೆತ್ತ ತಾಯಂ ಮಾರಿ ತೊತ್ತಕೊಂಬರೆ

೨) ಬಿಸುಡದಿರು ಬಿಸುಡದಿರು ಬೇಡ ಬೇಡಕಟಕಟ

೩) ತೆಗೆ ಜಡವೆಂಬುದು ಬರಿಸುಳ್ಳು

೪) ಸೂರ್ಯನು ಬರಿ ರವಿಯಲ್ಲವೋ ಆ ಭ್ರಾಂತಿಯ ಮಾಣೋ!

೫) ನಾನಿನಗೆ ನೀನನಗೆ ಜೇನಾಗುವಾ

೬) ಸತ್ಯವನ್ನ ಯಾವೋನು ಕಾಣುತ್ತಾನೋ ಅವನು ದುರದೃಷ್ಟಶಾಲಿ

೭) ನನ್ನ ವಿಜ್ಞಾನಕ್ಕೆ ಜ್ಞಾನದ ದಾಹ ಇದೆ

೮) ಸೂರ್ಯನೆ ನಿಂತಿದೆ, ಭೂಮಿಸುತ್ತುತಿದೆ, ಅವಳೇ ತಿರಿಗಾಲಿ

3. ಅ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) 'ವಸಿಷ್ಠ – ವಿಶ್ವಾಮಿತ್ರರ ವಾಗ್ವಾದವೆ ಹರಿಶ್ಚಂದ್ರ ಕಾವ್ಯಕ್ಕೆ ಮೂಲ' – ಈ ಹೇಳಿಕೆಯನ್ನು ಚರ್ಚಿಸಿ.

೨) ಚಂದ್ರಮತಿಯ ಪ್ರಲಾಪ ಮತ್ತು ಹರಿಶ್ಚಂದ್ರನ ನಿಷ್ಠುರ ವರ್ತನೆಗಳನ್ನು ಕುರಿತು ಬರೆಯಿರಿ.

ಆ) ಯಾವುದಾದರೂ ಒಂದನ್ನು ಕುರಿತು ಬರೆಯಿರಿ 05 ಅಂಕಗಳು

೧) ಹರಿಶ್ಚಂದ್ರನ ರಾಜ್ಯತ್ಯಾಗ ಪ್ರಸಂಗ

೨) ಹರಿಶ್ಚಂದ್ರನ ಜೊತೆಗೆ ಗಾನ ರಾಣಿಯರ ಸಂಭಾಷಣೆ

4. ಅ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) 'ಗೊಬ್ಬರ' ಕವನದಲ್ಲಿ ಶೂದ್ರಪ್ರಜ್ಞೆ ವ್ಯಕ್ತವಾಗುವ ಬಗೆಯನ್ನು ವಿವರಿಸಿ.

೨) 'ದೇವರು ರುಜುಮಾಡಿದನು' ಕವನದ ಸ್ವಾರಸ್ಯವನ್ನು ವಿವರಿಸಿ.

ಆ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ 05 ಅಂಕಗಳು

೧) 'ಪ್ರೇಮಗಣಿತ' ಕವನದ ಸ್ವಾರಸ್ಯವೇನು ?

೨) ಯಾವ ಕಾಲದ ಶಾಸ್ತ್ರವೇನು ಹೇಳಿದರೇನು ? ಕವನದ ಆಶಯವನ್ನು ವಿವರಿಸಿ.

5. ಅ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) "ಸತ್ಯದ ಹಾದಿ ಮುಳ್ಳಿನದೂ ಹೌದು"! ಗೆಲಿಲಿಯೋ ಪಾತ್ರವನ್ನು ಗಮನದಲ್ಲಿಟ್ಟುಕೊಂಡು ಈ ಹೇಳಿಕೆಯನ್ನು ವಿವರಿಸಿ.

೨) ಗೆಲಿಲಿಯೋ ಸ್ಯಾಗ್ರಿಡೊ ಸಂಭಾಷಣೆಯ ಸ್ವಾರಸ್ಯವೇನು? ವಿವರಿಸಿ.

ಆ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. 05 ಅಂಕಗಳು

೧) ಪ್ರಾಕ್ಯುರೇಟರ್ ಪಾತ್ರವನ್ನು ಪರಿಚಯಿಸಿ.

೨) ಚರ್ಚ್ ಮತ್ತು ವಿಜ್ಞಾನದ ಸಂಘರ್ಷ ಕುರಿತು ಬರೆಯಿರಿ.

ಮುಂದುವರೆದಿದೆ. . . . . . . 3

74

(80 ಅಂಕಗಳ ಸ್ಕೀಮ್ ನವರಿಗೆ ಕಡ್ಡಾಯ ಪ್ರಶ್ನೆ)
ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ.

10 ಅಂಕಗಳು

6. 1) ಅನಿಕೇತನ ಕವನದ ಅಶಯವನ್ನು ವಿವರಿಸಿ

ಅಥವಾ

2) ಸಾಮಾಜಿಕ ಅಸಮಾನತೆಯನ್ನು 'ಕಲ್ಕಿ' ಕವಿತೆ ಹೇಗೆ ಧ್ವನಿಸುತ್ತದೆ? ವಿವರಿಸಿ.

* * * * * *

75